ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಹಾಗೂ ಬಂಡವಾಳ ಖಾತೆಯಲ್ಲಿ 1764.44 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ: 23 ಕಾರ್ಮಿಕ

"31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಇಲಾಖೆಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2227.20 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ: 24 ಇಂಧನ

"31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಇಂಧನ ಇಲಾಖೆಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 200.00 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ: 25 ಕನ್ನಡ ಮತ್ತು ಸಂಸ್ಕೃತಿ

"31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ಬಂಡವಾಳ ಖಾತೆಯಲ್ಲಿ 1500.00 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ: 26 ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ

"31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಹಾಗೂ ಬಂಡವಾಳ ಖಾತೆಯಲ್ಲಿ 2994.00 173.00 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

[4] ಶಾಸನ ರಚನೆ

(ಅ) ಕರ್ನಾಟಕ ಧನ ವಿನಿಯೋಗ (ಸಂಖ್ಯೆ 4) ವಿಧೇಯಕ 2011

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ.ಎಸ್. ಯಡಿಯೂರಪ್ಪ(ಮಾನ್ಯ ಮುಖ್ಯ ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, 2011ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವನೆ ಮಂಡಿಸಲಾಯಿತು. ಈಗ ಪ್ರಸ್ತಾವನೆಯನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ;

"2011 ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು.
ಪ್ರಸ್ತಾವದ ವಿರೋಧವಾಗಿರುವವರು ಇಲ್ಲವೆಂದು ಸೂಚಿಸಬೇಕು.
ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ.
ಪ್ರಸ್ತಾವ ಹೌದು ಎನ್ನುವವರ ಪರವಾಗಿವೆ.
ಪ್ರಸ್ತಾವ ಹೌದು ಎನ್ನುವವರ ಪರವಾಗಿವೆ.
ಪ್ರಸ್ತಾವವು ಅಂಗೀಕೃತವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಮಾನ್ಯ ಮುಖ್ಯ ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, 2011ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ–2)

ಶ್ರೀ ವೆಂಕಟರಮಣಪ್ಪ:– ಮಾನ್ಯ ಸಭಾಧ್ಯಕ್ಷರೆ, ವಿರೊಧ ಪಕ್ಷದವರನ್ನು ಹೊರಗಡೆ ಇಟ್ಟು ಬೇಡಿಕೆಗಳನ್ನು ಪಾಸ್ ಮಾಡಿಕೊಳ್ಳುವುದು ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದ ಹಾಗಾಗುತ್ತದೆ.

ಅಧ್ಯಕ್ಷರು:– ಎಲ್ಲವನ್ನು ಕೇಳಿ ಆಯಿತು.

ಶ್ರೀ ವೆಂಕಟರಮಣಪ್ಪ:– ವಿರೋಧ ಪಕ್ಷದವರನ್ನು ಕರೆದು ಮಾತುಕತೆ ಮುಖಾಂತರ ಸಮಸ್ಯೆ ಪರಿಹರಿಸಿ. ಪಾರ್ಲಿಮೆಂಟಿನಲ್ಲಿ ನೀವು 20 ದಿನಗಳ ಕಾಲ ಪಾರ್ಲಿಮೆಂಟ್ ನಡೆಸುವುದಕ್ಕೆ ಬಿಡಲಿಲ್ಲ. ಆದರೆ ವಿರೋಧ ಪಕ್ಷದವರನ್ನು ಕರೆದು ಮಾತುಕತೆ ಬಗೆಹರಿಸಿದರು. ಈ ರೀತಿ ಮಾಡುವುದಾದರೆ ನಾವೂ ಕೂಡ ಸದನದಿಂದ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಪಕ್ಷೇತರ ಶಾಸಕರು ಸಭಾತ್ಯಾಗ ಮಾಡಿದರು)